### ರಜೆ ಎಂಬ ಐಷಾರಾಮಿ ಕನಸು

ಜ.2ರ ಸಂಚಿಕೆಯಲ್ಲಿ ಪ್ರಕಟವಾದ ಡಿ.ಎಂ. ಘನಶ್ಯಾಮ ಅವರ 'ರಜೆ ಎಂಬ ಐಷಾರಾಮಿ ಕನಸು' ಬರಹ ಓದಿದೆ. ಗೇಣು ಹೊಟ್ಟೆಗಾಗಿ, ದುಡಿಯಲೊಂದು ಕೆಲಸಕ್ಕಾಗಿ ಸಿ.ಆರ್.ಪಿ.ಎಫ್‌ಗೆ ನೇಮಕಗೊಂಡು ಸೇವೆ ಸಲ್ಲಿಸುತ್ತಿರುವವರ ಪಾಡು ದಯನೀಯ. ಇಂದು ಈ ಊರಾದರೆ ನಾಳೆ ಮತ್ತೊಂದು ಊರು, ಅದೂ ಕಾಣದ ಸ್ಥಳ ಭಾಷೆ ಅರಿಯದ ಊರು. ಸ್ಥಿತಿಗತಿಗಳು ಹೀಗಿದ್ದಲ್ಲಿ ಎಂತಹ ಬಲಾಢ್ಯ ಮನಸ್ಸೂ ಕುಗ್ಗುವುದು ಸಹಜ. ಪ್ರಸ್ತುತ ದೇಶದ ಆಂತರಿಕ ಭದ್ರತೆ, ಶಾಂತಿ, ಸೌಹಾರ್ದತೆ ದೃಷ್ಟಿಯಿಂದ ಇವರ ಸೇವೆ ಅತ್ಯಮೂಲ್ಯ ಎನ್ನುವುದು ಅಲ್ಲಗಳೆಯುವಂತಿಲ್ಲ. ಹೀಗಾಗಿ ಈ ಕ್ಷೇತ್ರದಲ್ಲಿ ಸೇವೆಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಈಗಿರುವಂತಹ ಒತ್ತಡದ ಸ್ಥಿತಿ ತಿಳಿಗೊಳಿಸಿ ಹುರಿದುಂಬಿಸುವ ನಿಟ್ಟಿನಲ್ಲಿ ಯೋಚಿಸಿ ಕಾರ್ಯರೂಪಕ್ಕಿಳಿಸುವುದು ಸೂಕ್ತ.

—ಅರವಿಂದ. ಜಿ. ಜೋಷಿ, ಮೈಸೂರು

### ಬೆಳಕಿನ ನೆರಳು

ಧಾರಾವಾಹಿಯಾಗಿ ಬರುತ್ತಿರುವ ದಿನಕರ ಜೋಶಿಯವರ 'ಬೆಳಕಿನ ನೆರಳು' ಚೆನ್ನಾಗಿದೆ. ಡಿ.ಎನ್. ಶ್ರೀನಾಥ್ ಅದ್ಭುತವಾಗಿ ಕನ್ನಡಿಸಿದ್ದಾರೆ. ಅದಕ್ಕೆ ಪೂರಕವಾಗಿ ಮನೋಹರ ಆಚಾರ್ಯ ರವರು ಚಂದವಾಗಿ ಕಲೆಯನ್ನು ಒದಗಿಸಿದ್ದಾರೆ.

ನನಗೆ ಇಲ್ಲೊಂದು ಸಣ್ಣ ಅನುಮಾನ. ದಕ್ಷಿಣ ಆಫ್ರಿಕಾದಲ್ಲಿ ಬಾಪು ಬಹುತೇಕ ಮಧ್ಯವಯಸ್ಕರಾಗಿದ್ದರು. ಆಚಾರ್ಯರ ಎಲ್ಲ ಚಿತ್ರಗಳಲ್ಲಿ ಬಾಪುರವರನ್ನು ವಯಸ್ಕರಂತೆ ಕಾಣಿಸಿದ್ದಾರೆ. ಬಾಪು ಎಂದ ತಕ್ಷಣ ಸಾಮಾನ್ಯನೊಬ್ಬನ ಮನಸ್ಸಿನಲ್ಲಿ ಮೂಡುವ ವಯಸ್ಸಾದ, ಬೆನ್ನುಬಾಗಿದ, ಕೃಶಶರೀರದ, ಕನ್ನಡಕಧಾರಿಯ ಚಿತ್ರ ಅವರ ಮನಸ್ಸಿನಲ್ಲೂ ಮೂಡಿರಬಹುದು. ಅದಕ್ಕೆ ಹಾಗಾಗಿರಬಹುದು ಅಲ್ವಾ?

— ಜೆ. ಎ. ನಾಗಭೂಷಣ, ಮೈಸೂರು

### ಸೂಪರ್ ಪದ್ಯಗಳು



ಜ.2 ರ ಸುಧಾದಲ್ಲಿ ಪ್ರಕಟವಾದ ರಾಧೇಶ ತೋಳ್ಪಾಡಿ ಎಸ್. ಪದ್ಯಗಳು ಸೂಪರೋ ಸೂಪರ್. 'ಚಿನ್ನದ ನಾಡಿಗೆ ಹೊರಟೆವು ನಾವು, ಕನ್ನಡ ಅಕ್ಷರವಾಗಲಿಕೆ! ಅಲ್ಲೆಲ್ಲರಿಗೂ ಸ್ವಂತದ ಛಾಪು, ವ್ಯಷ್ಟಿಸಮಷ್ಟಿಯ ಬೆಳಗಲಿಕೆ!' ಆಹಾ.. ಸೊಗಸು..

—ವೀಣಾ ಜೋಶಿ, ಬಾರ್ಕೂರು

### ಕರದಲ್ಲಿ ನೆನಪು



ಜ. 2ರ ಸಂಚಿಕೆಯಲ್ಲಿ ಮಹತಿ ಅವರು ಬರೆದ 'ಕಿಂದರ ಜೋಗಿ ಕರದಳ್ಳಿ' ಲೇಖನ ಓದಿ ಕಣ್ಣಾಲಿಗಳು ತೇವಗೊಂಡವು. ಆದರೆ ವಿಧಿ ವಿಲಾಸದ ಮುಂದೆ ನಾವೆಲ್ಲ ಕುಬ್ಜ ಹುಲುಮಾನವರು. ಯಾದಗಿರಿ ಜಿಲ್ಲೆಯ ನಮ್ಮ ತಾಲ್ಲೂಕು ಶಹಾಪುರದ ಕರದಳ್ಳಿಯವರು ಮಕ್ಕಳ ಸಾಹಿತಿಯಾಗಿ ಬೆಳೆದಿದ್ದನ್ನು ನಾವ್ಯಾರೂ ಮರೆಯುವುದಿಲ್ಲ. ಈಗ ಈ ಲೋಕ ಇವರ ಹಠಾತ್ ನಿರ್ಗಮನದಿಂದ ಚಂದ್ರನಿಲ್ಲದ ಬಾನಿನಂತಾಗಿದೆ.

—ಮಲ್ಲಿಕಾರ್ಜುನ ಗಟ್ಟಿ ಗೋಗಿ



### ದೇವಕಣದ ಪಿತಾಮಹ

ಜ.2ರ ಸಂಚಿಕೆಯಲ್ಲಿ ಗುರುರಾಜ್ ದಾವಣಗೆರೆ ಅವರು ಬರೆದ 'ದೇವಕಣದ ಪಿತಾಮಹ' ಎಂಬ ಲೇಖನದಲ್ಲಿ ವಿನೂತನ ಚಿಂತನೆಯ ವಿಜ್ಞಾನಿ ಸತ್ಯೇಂದ್ರನಾಥ್ ಬೋಸ್ ಅವರ ಕುರಿತು ಸೊಗಸಾಗಿ ಪರಿಚಯಿಸಿದ್ದಾರೆ. ಬೋಸರು ಹೇಳಿದ 'ನೊಬೆಲ್ ಬಹುಮಾನ ಮುಖ್ಯವಲ್ಲ; ಮುಂಬರುವ ವೈಜ್ಞಾನಿಕ ಚಿಂತನೆ ಚರ್ಚೆಗಳಲ್ಲಿ ನನ್ನ ಹೆಸರು ಬರುತ್ತದೋ ಇಲ್ಲವೋ ಎಂಬುದು ಮುಖ್ಯ' ಎಂಬ ಮಾತುಗಳು ಅರ್ಥಪೂರ್ಣವಾಗಿವೆ.

—ಎಸ್. ಚಂದ್ರಕಾಂತ

### ಉತ್ತಮ ಕಥೆಗಳು

ಡಿ. 26ರ ಸಂಚಿಕೆಯಲ್ಲಿ ಪ್ರಕಟವಾದ 'ಕೋಮಿನ ಸುಳಿಯಲ್ಲಿ' ಮತ್ತು 'ಸಾಯ್ಲೇ ಬೇಕಾ' ಎಂಬ ಎರಡು ಕಥೆಗಳು (ಲೇ: ಉದಯ್ ಜಾದೂಗಾರ್) ಬಹಳ ಸುಂದರವಾಗಿವೆ ಮತ್ತು ಮನೋಜ್ಞವಾಗಿವೆ. ಜೀವನದ ವಾಸ್ತವಗಳಿಗೆ ಇಟ್ಟ ಕನ್ನಡಿಯಂತಿವೆ. ಸರಳ ನಿರೂಪಣೆ— ನಮ್ಮಲ್ಲೇ ನಡೆಯಬಹುದಾದ ಘಟನೆಗಳನ್ನು ಆರಿಸಿ ಸೂಕ್ಷ್ಮವಾಗಿ ಕಥೆಗಾರರು ಕಟ್ಟಿದ್ದಾರೆ.

—ರೇಖಾ ಚೈತನ್ಯ, ಬೆಂಗಳೂರು

### ಚಿತ್ರರಂಗದ ನಿಲುವು ಸ್ವಾಗತಾರ್ಹ

ಜ.2 ರ ಸಂಚಿಕೆಯ ಗಾಂಧಿನಗರ ಪೋಸ್ಟ್‌ನ ಪದ್ಮನಾಭ ಭಟ್ ಅವರ ಲೇಖನದಲ್ಲಿ ಸದ್ಯದ ವಿದ್ಯಮಾನಗಳಿಗೆ ಕನ್ನಡ ಚಿತ್ರರಂಗದವರು ಮಾತನಾಡುತ್ತಿಲ್ಲ ಎಂದು ಬರೆದಿದ್ದಾರೆ. ಭಾರತದಲ್ಲಿ ನಡೆದ ಅಹಿತಕರ ಘಟನೆಗಳಿಗೆ ಕಾನೂನು ಕೈಗೆತ್ತಿಕೊಂಡಿದ್ದೇ ಕಾರಣ. ದೇಶದ್ರೋಹಿಗಳ ಹೀನಕೃತ್ಯಕ್ಕೆ ರಾಜಕೀಯ ಪಕ್ಷಗಳು ಕಾರಣ. ಈ ಬಗ್ಗೆ ಕನ್ನಡದ ಪ್ರಜ್ಞಾವಂತ ಚಿತ್ರರಂಗದವರ ನಿಲುವು ಸ್ವಾಗತಾರ್ಹ. ರಾಜಕೀಯ ಪಕ್ಷಗಳ ಪ್ರೇರಿತ ಹಿಂಸೆಗೆ ಭಾರತ ಬಲಿಯಾಗದಿರಲಿ. ಉರಿವ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಯಾರೂ ಮಾಡದಿರಿ.

—ಮನೋಹರ ಎಚ್. ಉದ್ಯಾವರ

### ಏಕಮುಖ ಲೇಖನಗಳು

ನಾನು ಬಾಲ್ಯದಿಂದಲೂ 'ಸುಧಾ' ಓದುಗ. ಇತ್ತೀಚೆಗೆ ಬರುತ್ತಿರುವ ಲೇಖನಗಳು ಏಕಮುಖವಾಗಿರುತ್ತವೆ. ಜ. 2ರ ಸಂಚಿಕೆಯಲ್ಲಿ ಒಂದೇ ಅಜೆಂಡಾ ಇರುವ ಲೇಖಕರಿಂದ ಲೇಖನಗಳನ್ನು ಬರೆಸಲಾಗಿವೆ. ಅವು ಏಕಮುಖ ಮತ್ತು ನಕಾರಾತ್ಮಕವಾಗಿವೆ.

—ರಾಘವ

### ಪ್ರಶಸ್ತಿಗೆ ಆಹ್ವಾನ

ಬರಗೂರು ಪುಸ್ತಕ ಪ್ರಶಸ್ತಿ (ವಿಚಾರ ಸಾಹಿತ್ಯ) ಮತ್ತು ಶ್ರೀಮತಿ ರಾಜಲಕ್ಷ್ಮೀ ಬರಗೂರು ಪುಸ್ತಕ ಪ್ರಶಸ್ತಿಗಾಗಿ (ಕಾದಂಬರಿ) ಕೃತಿಗಳನ್ನು ಆಹ್ವಾನಿಸಲಾಗಿದೆ. 'ನಾಡೋಜ ಡಾ. ಬರಗೂರು ಪ್ರತಿಷ್ಠಾನ' ಈ ಪ್ರಶಸ್ತಿಯನ್ನು ಕೊಡುತ್ತದೆ. ಇದು ತಲಾ ಹತ್ತು ಸಾವಿರ ರೂಪಾಯಿ ನಗದು, ಫಲಕ ಮತ್ತು ಪ್ರಶಸ್ತಿ ಪತ್ರಗಳನ್ನು ಒಳಗೊಂಡಿದೆ. ಆಸಕ್ತರು 2018 ಮತ್ತು 2019ರಲ್ಲಿ ಪ್ರಕಟವಾದ ವಿಚಾರ ಸಾಹಿತ್ಯ ಮತ್ತು ಕಾದಂಬರಿಗಳ ತಲಾ ಮೂರು ಪ್ರತಿಗಳನ್ನು ಜ. 30ರ ಒಳಗೆ ಕಳುಹಿಸಿಕೊಡಬೇಕು.

ವಿಳಾಸ: ಎ.ವಿ. ಲಕ್ಷ್ಮೀನಾರಾಯಣ, ಬೆಳಕು, 3ನೇ ಬ್ಲಾಕ್, ವಿಶ್ವೇಶ್ವರಯ್ಯ ಬಡಾವಣೆ, ಸೊಣ್ಣೇನಹಳ್ಳಿ ಬ್ರಿಡ್ಜ್ ಹತ್ತಿರ, ಬೆಂಗಳೂರು–560110 ಮೊಬೈಲ್: 9964640890

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in